# ಎನ್‌ಐಟಿಕೆ ಸುರತ್ಕಲ್‌ನಲ್ಲಿ ನವೀನ ಎಐ ವೇದಿಕೆ ಆರಂಭ



**ಸುರತ್ಕಲ್, ಎ 11:** ಇಲ್ಲಿನ ಎನ್‌ಐಟಿಕೆಯಲ್ಲಿ ನವೀನ ಎಐ ವೇದಿಕೆ ಆರಂಭಗೊಂಡಿದೆ. ದೂರದ ಹಾಗೂ ವಿಪತ್ತು ಪೀಡಿತ ಪ್ರದೇಶಗಳಲ್ಲಿ ಕ್ಲೌಡ್ ಸೌಲಭ್ಯಗಳಿಲ್ಲದ ಸಂದರ್ಭಗಳಲ್ಲಿ ಬಳಸಲು ಇದನ್ನು ವಿನ್ಯಾಸಗೊಳಿಸಲಾಗಿದೆ.

ಸಂಶೋಧನಾ ಕೇಂದ್ರದಲ್ಲಿ ಪುನರ್‌ಬಳಕೆ ಮಾಡಲಾದ ಕಂಟೈನರ್‌ನಲ್ಲಿ ಈ ವ್ಯವಸ್ಥೆ ಸ್ಥಾಪಿಸಲಾಗಿದ್ದು ಗ್ರಿಡ್, ಸೌರ ಬ್ಯಾಟರಿ ಮತ್ತು ಡೀಸೆಲ್ ಜನರೇಟರ್ ಮೂಲಕ ನಿರಂತರ ವಿದ್ಯುತ್ ಪೂರೈಕೆ ದೊರೆಯುತ್ತದೆ. ಫೈಬರ್, ಬ್ರಾಡ್‌ಬ್ಯಾಂಡ್ ಮತ್ತು ವೈರ್‌ಲೆಸ್ ಸಂಪರ್ಕಗಳ ಮೂಲಕ ಡೇಟಾ ಸಂವಹನವನ್ನು ಸುಧಾರಿಸಲಾಗಿದೆ.

ಈ ಯೋಜನೆ ಡಾ। ಪೃಥ್ವಿರಾಜ್ ಯು. ಅವರ ಕಲ್ಪನೆ ಆಗಿದ್ದು ಎಡ್ಜ್ ಎಐ, ನೀರಿನ ವ್ಯವಸ್ಥೆಗಳು ಮತ್ತು ವಿಪತ್ತು ನಿರ್ವಹಣೆಯಲ್ಲಿ ಉಪಯೋಗವಾಗಲಿದೆ ಎಂದು ಸಂಸ್ಥೆ ತಿಳಿಸಿದೆ.

ಹಳೆಯ ವಿದ್ಯಾರ್ಥಿ ಪದ್ಮನಂದ ವಾರಿಯರ್ ಮಾರ್ಗದರ್ಶನ ನೀಡುತ್ತಿದ್ದಾರೆ. ನೊಮಾಡ್ ಮೂಲಕ ಸ್ಥಳೀಯವಾಗಿ ಡೇಟಾ ಸಂಸ್ಕರಣೆ ಮಾಡಿ ತ್ವರಿತ ನಿರ್ಧಾರ ಕೈಗೊಳ್ಳಲು ಸಾಧ್ಯವಾಗಲಿದೆ.

Udayavani, Date: 12/04/2026, p.01